# ರಂಗಶಿಕ್ಷಕ, ನಟ



## ಶ್ರೀಧರ್ ನಾಯ್ಕ

### ಉದಯದ ‘ದೊಡ್ಮನೆ ಸೊಸೆ’ಯ ನಾಗೇಶ

★ *ಪಾತ್ರಕ್ಕೆ ಒಪ್ಪಿದಾಗ ಹೇಗೆನ್ನಿಸಿತು?*

ನಾನು ಸೂಕ್ತ ಅಲ್ಲ ಎಂಬುದು ಮೊದಲ ಪ್ರತಿಕ್ರಿಯೆ ಆಗಿತ್ತು. ವಯಸ್ಸಿನಲ್ಲಿ ನನಗಿಂತ ಸುಮಾರು 10 ವರ್ಷ ಹೆಚ್ಚಿರುವ ಪಾತ್ರ. ದೈಹಿಕ ಚಹರೆ ಕೂಡ ಅಷ್ಟಿರಲಿಲ್ಲ. ಆದರೆ ನಿರ್ದೇಶಕ ದರ್ಶಿತ್ ಅವರ ‘ನೀವೇ ಮಾಡಬೇಕು’ ಎನ್ನುವ ಒತ್ತಾಯಕ್ಕೆ ಮಣಿದು ಮೇಕಪ್ ಮಾಡಿದೆ. ಮೀಸೆಯನ್ನು ದಪ್ಪಗೊಳಿಸಿದೆ. ವಿಗ್ ಹಾಕಿ ಸ್ಕ್ರೀನ್ ಪ್ಲೇ ಮಾಡಿದ ಮೇಲೆ ಭರವಸೆ ಮೂಡಿತು ಒಪ್ಪಿದೆ.

★ *ನಟನೆಯ ಆಶೆ ಚಿಗುರಿದ್ದು ಹೇಗೆ?*

ಭರತನಾಟ್ಯವನ್ನು 19 ವರ್ಷದಿಂದ ಕಲಿಯುತ್ತಿದ್ದೇನೆ. ಕರ್ನಾಟಕ ಸಂಗೀತವನ್ನು ಕಲಿಯುವ ಆಸಕ್ತಿ ಮೂಡಿತು. ಅದು ನನಗೆ ರಂಗಭೂಮಿ ಪ್ರವೇಶಕ್ಕೆ ದಾರಿ ಮಾಡಿತು. 19 ವರ್ಷಗಳ ಕಾಲ ‘ಅಭಿನಯ ತರಂಗ’ದಲ್ಲಿ ತೊಡಗಿದೆ. ಅಷ್ಟರಲ್ಲಿ ಕೌಟುಂಬಿಕ ಭಿನ್ನಾಭಿಪ್ರಾಯದ ಕಾರಣಕ್ಕೆ ಮನೆಯಿಂದ ಹೊರಬಂದೆ. ಆಗ ನನಗೆ ಎ.ಎಸ್.ಮೂರ್ತಿ ಅವರೇ ನೆಲೆ ಕಲ್ಪಿಸಿದರು. ಆದರ್ಶ ಫಿಲ್ಮ್ ಸ್ಕೂಲ್‌ನಲ್ಲಿ ಹಿನ್ನೆಲೆ ಗಾಯನ ಅಭ್ಯಾಸ ಮಾಡುತ್ತಿದ್ದಾಗ ಜ್ಯೋತಿ ಅವರ ಪರಿಚಯವಾಯಿತು ಅವರನ್ನು ಮದುವೆಯಾದೆ. ಆಮೆಲೆ ರಂಗಭೂಮಿಯಿಂದ ದುಡಿಯುವ ಮಾರ್ಗ ಅನಿವಾರ್ಯವಾಯಿತು. ರಂಗ ಶಿಕ್ಷಕನಾಗಿ, ನಿರ್ದೇಶಕನಾಗಿ, ಸ್ವತಃ ನಟನಾಗಿ ವೃತ್ತಿಯನ್ನು ಆರಂಭಿಸಿದೆ. ಸುಮಾರು ಇಪ್ಪತ್ತು ಧಾರಾವಾಹಿ, ಆರು ಸಿನಿಮಾಗಳಲ್ಲಿ ನಟಿಸಿದ್ದೇನೆ.

★ *ನಾಗೇಶನಾಗಿ ಹೇಗೆನಿಸುತ್ತದೆ?*

ನನಗೆ ಹೆಣ್ಣು ಮಗು ಎಂದರೆ ತುಂಬಾ ಇಷ್ಟವಿತ್ತು. ಆದರೆ ಗಂಡು ಮಗು ಆಯಿತು. ಸುದೈವಕ್ಕೆ ನನಗೆ ಇಲ್ಲಿ ಒಬ್ಬ ಹುಡುಗಿಯ ತಂದೆ ಆಗುವ ಭಾಗ್ಯ ಬಂದಿದೆ. ಅದರಲ್ಲೂ ಜವಾಬ್ದಾರಿಯುತ ಪೋಷಕನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುವ ಪಾತ್ರ ನನಗೆ ತುಂಬಾ ಇಷ್ಟ ಆಗಿದೆ.

★ *ಬೀದಿ ನಾಟಕದ ಪರಿಕಲ್ಪನೆ ಏನು?*

ಸದ್ಯ ‘ಮನೋಸ್ಥಿತಿ’ ಎನ್ನುವ 15 ನಿಮಿಷಗಳ ನನ್ನ ನಾಟಕವನ್ನು ಸಮಯ ಸಿಕ್ಕಲ್ಲೆಲ್ಲಾ ಪ್ರದರ್ಶಿಸುತ್ತೇನೆ. ಧಾರಾವಾಹಿ ಚಿತ್ರೀಕರಣಕ್ಕೆ ಹೋದಾಗ ಕೂಡ ಸಂಜೆ ಬಿಡುವು ಸಿಕ್ಕಾಗ ಚಿತ್ರತಂಡದವರಿಗಾಗಿ ನಾಟವನ್ನು ಆಡುತ್ತೇನೆ. ಅದರ ಮುಖ್ಯ ಉದ್ದೇಶ ಲೈಂಗಿಕ ಶೋಷಣೆ ಯಾವ ಯಾವ ರೂಪದಲ್ಲಿ ನಡೆಯುತ್ತದೆ ಎಂದು ತಿಳಿಸುವುದು. ಅದರ ನಿಯಂತ್ರಿಸುವ ಅಗತ್ಯದ ಅರಿವು ಮೂಡಿಸುವುದು. ರಂಗ ಶಾಲೆಯಲ್ಲಿಯೂ ಚಿಕ್ಕ ಚಿಕ್ಕ ಮಕ್ಕಳಿಗೂ ನಟನೆಯನ್ನು ಕಲಿಸಿ ಅವರಿಂದ ಪರಿಸರ ಸಂರಕ್ಷಣೆ, ಸ್ವಚ್ಛತೆ ಕುರಿತ ಅಭಿಯಾನ, ಟ್ರಾಫಿಕ್ ನಿಯಮಗಳ ಬಗ್ಗೆ ಅರಿವು ಮೂಡಿಸುವ ಬೀದಿ ನಾಟಕಗಳನ್ನು ಆಡಿಸುತ್ತೇನೆ.

■ ರಾಘವೇಂದ್ರ


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ



ಶ್ರೀ ಸಾಯಿಬಾಬ ಉಪಾಸಕರು

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬೆಂಗಳೂರು. 9620444460